


ಒಂದು ಊರಲ್ಲಿ ಒಬ್ಬ ರಾಜ ಇದ್ದನು. ಅವನ ಅರಮನೆದಲ್ಲಿ ತುಂಬಾ ಜ್ಞಾನಿಗಳಾದ ಮಂತ್ರಿಗಳು ಇದ್ದರು. ರಾಜನಿಗೆ ಒಂದು ವಿಶೇಷ ಅಭ್ಯಾಸ, ಪ್ರತಿದಿನ ದರ್ಬಾರಿನಲ್ಲಿ ಒಂದು ಹೊಸ ಪ್ರಶ್ನೆ ಕೇಳುವುದು!
ಒಂದು ದಿನ ರಾಜನು ಕೇಳಿದನು:
“ನಿಮಗೆ ಎಲ್ಲಕ್ಕಿಂತ ಹೆಚ್ಚು ಸುಖ ಯಾವಾಗ ಸಿಗುತ್ತದೆ?”
ಮಂತ್ರಿಗಳು ಒಬ್ಬೊಬ್ಬರಾಗಿ ಉತ್ತರಿಸಿದರು.
ಒಬ್ಬನು ಹೇಳಿದನು:
“ಬಹಳ ಬಂಗಾರ ಇದ್ದರೆ ಸುಖ.”
ಮತ್ತೊಬ್ಬನು ಹೇಳಿದನು:
“ದೊಡ್ಡ ಮನೆ ಇದ್ದರೆ ಸುಖ.”
ಇನ್ನೊಬ್ಬನು ಹೇಳಿದನು:
“ರುಚಿಯಾದ ಊಟ ಸಿಕ್ಕರೆ ಸುಖ.”
ರಾಜನು ಎಲ್ಲರ ಉತ್ತರಗಳನ್ನು ಕೇಳಿದನು. ಆದರೆ ಅವನಿಗೆ ತೃಪ್ತಿ ಆಗಲಿಲ್ಲ.
ಅಷ್ಟರಲ್ಲಿ ಊರಿನ ಒಬ್ಬ ಚತುರ ಯುವಕ ಮುಂದೆ ಬಂದು ಹೇಳಿದನು:
“ರಾಜನೇ, ಎಲ್ಲಕ್ಕಿಂತ ದೊಡ್ಡ ಸುಖ ಅಂದರೆ ಮೂತ್ರ ವಿಸರ್ಜನೆ ಮಾಡಿ ಹೊಟ್ಟೆ ಹಗುರವಾದಾಗ ಸಿಗುವ ನೆಮ್ಮದಿ!”
ರಾಜನಿಗೆ ಆಶ್ಚರ್ಯವಾಯಿತು.
“ಅದು ಹೇಗೆ?” ಎಂದು ಕೇಳಿದನು.
ಯುವಕನು ಹೇಳಿದನು:
“ನಾನು ತೋರಿಸುತ್ತೇನೆ ರಾಜರೆ, ಆದರೆ ನೀವು ನನ್ನ ಮಾತು ಕೇಳಬೇಕು.”ರಾಜನು ಒಪ್ಪಿದನು.

ಮುಂದಿನ ದಿನ ಯುವಕನು ಎಲ್ಲರಿಗೂ ಸಭೆಯಲ್ಲಿ ತೆಂಗಿನ ನೀರು, ಹಾಲು, ಮಜ್ಜಿಗೆ, ಹಣ್ಣಿನ ರಸ ಕೊಡಿಸಿ, “ಎಷ್ಟು ಬೇಕಾದರೂ ಕುಡಿಯಿರಿ!” ಎಂದನು. ಎಲ್ಲರೂ ಖುಷಿಯಿಂದ ಕುಡಿದರು. ನಂತರ ಯುವಕನು ಸಭೆಯ ಬಾಗಿಲು ಮುಚ್ಚಿದನು. “ಸ್ವಲ್ಪ ಹೊತ್ತು ಯಾರೂ ಹೊರಗೆ ಹೋಗಬಾರದು,” ಎಂದನು

ಮೊದಲು ಎಲ್ಲರೂ ಸುಮ್ಮನಿದ್ದರು. ಆದರೆ ಹೆಚ್ಚು ತೆಂಗಿನ ನೀರು, ಹಾಲು, ಮಜ್ಜಿಗೆ, ಹಣ್ಣಿನ ರಸ ಕುಡಿದಿದ್ದರಿಂದ ಮೂತ್ರ ವಿಸರ್ಜನೆ ಮಾಡಬೇಕೆಂದು ಅನಿಸಿತು. ಎಲ್ಲರೂ ಹೊರಗೆ ಹೋಗಲು ಇಚ್ಛಿಸಿದರು.
ಅವರು ಬೇಡಿಕೊಂಡರು“ದಯವಿಟ್ಟು ಬಾಗಿಲು ತೆರೆ!”
ಯುವಕ "ನೀವು ಸಂಜೆಯವರೆಗೆ ಈ ಸಭಾಂಗಣ ಬಿಟ್ಟು ಹೊರಗೆ ಹೋಗದಿದ್ದರೆ ನೀವು ಕೇಳಿದಷ್ಟು ಸಂಪತ್ತು, ಭೂಮಿ ಎಲ್ಲವನ್ನೂ ಕೊಡುತ್ತೇವೆ" ಎಂದು ಹೇಳಿದ.
ಆದರೆ ಮೂತ್ರ ತುಂಬಿಕೊಂಡು ಯಾತನೆ ಪಡುತ್ತಿದ್ದ ಜನರಿಗೆ ಯಾವುದೂ ಬೇಡವಾಗಿತ್ತು. ಒಂದು ಸಾರಿ ಹೊರಗೆ ಬಿಟ್ಟರೆ ಸಾಕು ಎಂದು ಹೊಟ್ಟೆ ಹಿಡಿದುಕೊಂಡು ಬೇಡಿಕೊಂಡರು
ಯುವಕನು ರಾಜನನ್ನು ಕರೆದು ಹೇಳಿದನು, “ರಾಜನೇ, ಈಗ ಇವರ ಮುಖ ನೋಡಿದ್ದೀರಲ್ವಾ?. ಸ್ವಲ್ಪ ಹೊತ್ತಿನಲ್ಲಿ ಮತ್ತೆ ನೋಡಿ.” ಸ್ವಲ್ಪ ಸಮಯದ ನಂತರ ಬಾಗಿಲು ತೆರೆದನು.
ಎಲ್ಲರೂ ಬೇಗ ಹೊರಗೆ ಹೋಗಿ ಬಂದು ತುಂಬಾ ಹಗುರವಾಗಿ, ಸಂತೋಷದಿಂದ ಕಾಣಿಸಿದರು.ಅವರ ಮುಖದಲ್ಲಿ ರಾಜ್ಯ ಗೆದ್ದ ಸಂತೋಷ ಇತ್ತು.
“ಅಯ್ಯೋ! ಈಗ ತುಂಬಾ ಚೆನ್ನಾಗಿದೆ! ಎಷ್ಟು ನೆಮ್ಮದಿ!” ಎಂದು ಹೇಳಿದರು. ರಾಜನು ನಕ್ಕನು.
ಯುವಕನು ಹೇಳಿದನು, “ರಾಜನೇ, ದೇಹದ ಆರೋಗ್ಯ ಮತ್ತು ನೆಮ್ಮದಿ ಇಲ್ಲದಿದ್ದರೆ ಬಂಗಾರವೂ, ಮನೆವೂ, ಊಟವೂ ಸುಖ ಕೊಡಲಾರವು.” ರಾಜನು ಯುವಕನ ಬುದ್ಧಿಗೆ ಮೆಚ್ಚಿ ಅವನನ್ನು ಸನ್ಮಾನ ಮಾಡಿದನು.

**ನೀತಿ**

**ದೇಹ ಆರೋಗ್ಯವಾಗಿದ್ದು, ಮನಸ್ಸು ಹಗುರವಾಗಿರುವುದೇ ನಿಜವಾದ ಸುಖ.**
**ಹಣ, ಬಂಗಾರ, ದೊಡ್ಡ ಮನೆ ಎಲ್ಲವು ಆರೋಗ್ಯ ಇದ್ದಾಗ ಮಾತ್ರ ಸುಖ ಕೊಡುತ್ತವೆ.**